# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ:02.02.2019.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ:ಬೆಂಗ್ರಾಜಿಪಂ/ಅಭಿ-2/ಸಿ.ಆರ್-98/ಮಣ್ಣೆಗ್ರಾ.ಪಂ.ಅ/2019-20 ದಿನಾಂಕ: 07-02-2020.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂ. ಪ್ರಾಆಕ/ಅಭಿವೃದ್ಧಿ/ಸಿಆರ್/92/2019-20, ದಿನಾಂಕ: 19.06.2020.
4. ಸರ್ಕಾರದ ಇದೇ ಸಮ ಸಂಖ್ಯೆಯ 2ನೇ ಕಾರಣ ಕೇಳುವ ನೋಟೀಸು ದಿನಾಂಕ:07-07-2020.
5. ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ.
6. ಸರ್ಕಾರದ ಇದೇ ಸಮ ಸಂಖ್ಯೆಯ ವಿಚಾರಣಾ ತಿಳುವಳಿಕೆ ಪತ್ರ ದಿನಾಂಕ:19-11-2020,

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43-ಎ ರಡಿ ಗ್ರಾಮ ಪಂಚಾಯಿತಿ ಸದಸ್ಯರುಗಳು, ಪ್ರಕರಣ 48(4) ಮತ್ತು 48(5) ರಡಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಮೇಲೆ ದುರ್ವತನೆ, ಅಧಿಕಾರ ಮತ್ತು ಹಣ ದುರುಪಯೋಗಪಡಿಸಿಕೊಂಡ ಆರೋಪಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳುವ ಸಲುವಾಗಿ ವಿಚಾರಣೆ ನಡೆಸುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರುಗಳಿಗೆ ವಹಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಭ್ರಷ್ಟಾಚಾರ ನಿಗ್ರಹ ದಳದ ದಾಳಿಗೆ ಸಿಲುಕಿ ಬಂಧನವಾಗಿರುವ ಬಗ್ಗೆ ವಿಚಾರಣೆ ನಡೆಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಪತ್ರ ಸಂಖ್ಯೆ:ಬೆಂಗ್ರಾಜಿಪಂ/ಅಭಿ-2/ಸಿಆರ್-98/ಮಣ್ಣೆಗ್ರಾ.ಪಂ.ಅ/2019-20, ದಿನಾಂಕ:07.02.2020 ರಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರು ಪತ್ರ ಸಂಖ್ಯೆ:ಪ್ರಾಆಕ/ಅಭಿವೃದ್ಧಿ/ಸಿಆರ್/92/2019-20, ದಿನಾಂಕ:19.06.2020 ರಲ್ಲಿ ವಿಚಾರಣೆ ಮಾಡಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ತ್ಯಾಮಗೊಂಡ್ಲು ಹೋಬಳಿ, ತಾವರೆಕೆರೆ ಗ್ರಾಮದ ಖಾನೇಷುಮಾರಿ ನಂಬರ್ 36/122ರ ಖಾಲಿ ನಿವೇಶನ ಶ್ರೀ ಟಿ.ಕೆ. ವಾಸುದೇವಮೂರ್ತಿ, ಫಿರ್ಯಾದುದಾರರಾದ ಇವರ ಪಿತ್ರಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತಿನ ಖಾತೆ ಮಾಡಿಕೊಡುವ ಸಂಬಂಧ ಇವರಿಂದ ರೂ.3500/-ಗಳ ಲಂಚದ ಹಣವನ್ನು ಪಡೆದುಕೊಳ್ಳುವಾಗ ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಜಿಲ್ಲೆ ರವರಿಗೆ ಸಿಕ್ಕಿಬಿದ್ದಿದ್ದು, ಇವರನ್ನು ದಿನಾಂಕ:08.01.2020 ರಂದು ದಸ್ತಗಿರಿ ಮಾಡಿ ಬಂಧನದಲ್ಲಿರಿಸಿರುವುದು ಹಾಗೂ ಸದರಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿರುವುದಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಪತ್ರದ ಸಂ.ಗ್ರಾಅಪ 186 ಜಿಪಿಎಸ್ 2020, ದಿನಾಂಕ:05.05.2020 ರಲ್ಲಿ ಈ ಕಛೇರಿಗೆ ಬರೆದಿರುವ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ದಿನಾಂಕ:07.07.2020 ರಂದು ಕಾರಣ ಕೇಳುವ ನೋಟೀಸ್ ನೀಡಿ ಅವರಿಂದ ಸಮಜಾಯಿಷಿಯನ್ನು ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಕಾರಣ ಕೇಳುವ ನೋಟೀಸಿಗೆ ಲಿಖಿತ ಸಮಜಾಯಿಷಿ ನೀಡಿರುತ್ತಾರೆ. ಸಮಜಾಯಿಷಿಯಲ್ಲಿ ಶ್ರೀ ಟಿ.ಕೆ. ವಾಸುದೇವಮೂರ್ತಿರವರ ಪಿತ್ರಾರ್ಜಿತ ಸ್ವತ್ತಿನ ಖಾತೆ ಮಾಡಿಕೊಡುವ ಸಂಬಂಧ ಲಂಚದ ಹಣ ಪಡೆದಿರುತ್ತೇನೆಂದು ದೂರು ಸಲ್ಲಿಸಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ನಾನು ಅವರಿಂದ ಯಾವುದೇ ಲಂಚದ ಹಣ ಪಡೆದಿರುವುದಿಲ್ಲ. ಶ್ರೀ ಟಿ.ಕೆ. ವಾಸುದೇವಮೂರ್ತಿರವರ ಮೂಲತ: ವೃತ್ತಿ ಬೋರ್ಡ್ ಬರೆಯುವ ಪೈಂಟರ್ ಆಗಿದ್ದು, ಒಂದು ದಿನ ಪೈಂಟ್ ಬೋರ್ಡ್ ಬರೆಯುವುದಕ್ಕೆ ಪೈಂಟ್ ತೆಗೆದುಕೊಳ್ಳಲು ಹಣವಿಲ್ಲದಿದ್ದಾಗ ನನ್ನ ಬಳಿ ಬಂದು ಸಾಲದ ರೂಪದಲ್ಲಿ ರೂ.5000/–ಗಳನ್ನು ಪಡೆದಿದ್ದರು. ಅದನ್ನು ದಿನಾಂಕ:08.01.2020 ರಂದು 3500/–ರೂ.ಗಳನ್ನು ವಾಪಸ್ ಕೊಟ್ಟಿದ್ದಾರೆ. ನಾನು ಯಾವುದೇ ರೀತಿ ಲಂಚದ ಹಣವನ್ನು ಅವರಿಂದ ಪಡೆದಿಲ್ಲ. ಪಂಚಾಯಿತಿಗಳ ಯಾವುದೇ ಖಾತೆ ಮಾಡುವ ಅಧಿಕಾರ ನನಗೆ ಇರುವುದಿಲ್ಲ ಹಾಗೂ ವಾಸುದೇವಮೂರ್ತಿರವರ ಯಾವುದೇ ಪಿತ್ರಾರ್ಜಿತ ಸ್ವತ್ತನ್ನು ಖಾತೆ ಬದಲಾವಣೆ ಮಾಡಿರುವುದಿಲ್ಲ. ನಾನು ಕೇವಲ ಅವರು ಕೊಟ್ಟಿರುವ ಅರ್ಜಿಗಳ ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳಬಹುದು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಅರ್ಜಿಗಳ ಮೇಲೆ ಸೂಚಿಸಿರುತ್ತೇನೆ. ಶ್ರೀ ಟಿ.ಕೆ. ವಾಸುದೇವಮೂರ್ತಿಯವರ ಯಾವುದೇ ಖಾತೆ ಬದಲಾವಣೆ ಮಾಡಿಲ್ಲದರ ಬಗ್ಗೆ ಸೂಕ್ತ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಶ್ರೀ ವಾಸುದೇವಮೂರ್ತಿಯವರು ದಿನಾಂಕ:15.02.2019 ರಂದು ಒಂದು ಅರ್ಜಿಯನ್ನು ಪಂಚಾಯಿತಿಗೆ ಕೊಟ್ಟು ನಮ್ಮ ಆಸ್ತಿಯಾದ ಖಾತೆ ಸಂ.36/122 ರಲ್ಲಿ ಶ್ರೀ ನವೀನ್‌ಕುಮಾರ್, ನಾರಾಯಣ ಇತರರು ನಮ್ಮ ಆಸ್ತಿಯಲ್ಲಿ ಸ್ವಂತಕ್ಕಾಗಿ ರಸ್ತೆ ಮಾಡಲು ಹೊರಟಿದ್ದಾರೆ. ನಮ್ಮ ಆಸ್ತಿಯಲ್ಲಿ ಯಾವುದೇ ರಸ್ತೆ ಇರುವುದಿಲ್ಲ. ಅವರು ರಸ್ತೆ ಮಾಡುವುದನ್ನು ನಿಲ್ಲಿಸಿ ಎಂದು ಕೋರಿರುತ್ತಾರೆ. ಆದರೆ ತಾವರೆಕೆರೆ ಗ್ರಾಮದ ಇವರ ಆಸ್ತಿಯ ಪಕ್ಕ ಆಸ್ತಿಗೆ ಹೊಂದಿಕೊಂಡಿರುವಂತೆ ರಸ್ತೆ ಇದೆ. ಇ.ಓ. ಮತ್ತು ತಹಶೀಲ್ದಾರ್ ರವರ ಕಛೇರಿಯ ಭೂಮಾಪಕರು ಕಚ್ಚಾ ರಸ್ತೆಯನ್ನು ಪಕ್ಕಾ ರಸ್ತೆಯನ್ನಾಗಿ ಮಾಡಿ ಎಂದು ಆದೇಶ ಮಾಡಿರುತ್ತಾರೆ. ಇ.ಓ. ಮತ್ತು ಭೂಮಾಪಕರು ಮಾಡಿರುವ ಆದೇಶದ ಪ್ರತಿಯನ್ನು ಲಗತ್ತಿಸಿರುತ್ತೇನೆ. ಶ್ರೀ ಟಿ.ಕೆ. ವಾಸುದೇವಮೂರ್ತಿರವರ ಆಸ್ತಿ ತಾವರೆಕೆರೆ ಗ್ರಾಮದ ಖಾತೆ ನಂ.25/36, 122 ಟಿ.ಎಚ್.ಕೃಷ್ಣಪ್ಪ ಬಿನ್ ಹನುಮಯ್ಯರವರ ಹೆಸರಿನಲ್ಲಿದ್ದು, ಅದಕ್ಕೆ ಸಂಬಂಧಿಸಿದ ಪಂಚಾಯಿತಿ ದೃಢೀಕೃತ ಪ್ರತಿಲಗತ್ತಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಪಿತ್ರಾರ್ಜಿತ ಸ್ವತ್ತಿನ ಖಾತೆ ಬದಲಾವಣೆ ಮಾಡಿಕೊಡಿ ಎಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನಾನು ಯಾವುದೇ ಖಾತೆ ಬದಲಾವಣೆ ಮಾಡಿಲ್ಲ ಹಾಗೂ ಅವರಿಂದ ನಾನು ಯಾವುದೇ ಲಂಚದ ಹಣ ಪಡೆದಿರುವುದಿಲ್ಲ. ನನಗೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ನಾನು ಅಧ್ಯಕ್ಷನಾಗಿ ಸತ್ಯ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನ್ನ ಮೇಲೆ ದುರುದ್ದೇಶದಿಂದ ಹಾಗೂ ರಾಜಕೀಯ ಪ್ರೇರಿತವಾಗಿ ಕೆಟ್ಟ ಹೆಸರು ತರಲು ಹಾಗೂ ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕೆಂಬ ಉದ್ದೇಶದಿಂದ ಶ್ರೀ ವಾಸುದೇವಮೂರ್ತಿ ಹಾಗೂ ಇತರರು ಸೇರಿ ಉದ್ದೇಶಪೂರ್ವಕವಾಗಿ ಎ.ಸಿ.ಬಿ. ಗೆ ಹೇಳಿ ಟ್ರ್ಯಾಪ್ ಮಾಡಿರುತ್ತಾರೆ. ನಾನು ಯಾವುದೇ ತಪ್ಪು ಮಾಡಿಲ್ಲ. ಬೇಕಾದರೆ ಇಲಾಖಾ ತನಿಖೆ ನಡೆಸಿ, ನನ್ನ ಮೇಲೆ ಕ್ರಮ ಕೈಗೊಳ್ಳಬಹುದು ಎಂಬುದಾಗಿ ಲಿಖಿತ ಹೇಳಿಕೆ ನೀಡಿರುತ್ತಾರೆ.

ಸದರಿ ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ದಿನಾಂಕ:19.11.2020 ರಂದು ವಿಚಾರಣಾ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲಾಯಿತು ಹಾಗೂ ದಿನಾಂಕ:26.11.2020 ರಂದು ವಿಚಾರಣೆಗೆ ತೆಗೆದುಕೊಂಡು ವಿಚಾರಣೆಯಲ್ಲಿ ಆರೋಪಿತ ಮಾಜಿ ಅಧ್ಯಕ್ಷರಾದ ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ರವರು ಈಗಾಗಲೇ ಲಿಖಿತವಾಗಿ ಪ್ರಾದೇಶಿಕ ಆಯುಕ್ತರಿಗೆ ಲಿಖಿತ ಹೇಳಿಕೆ ಸಲ್ಲಿಸಲಾಗಿದೆ. ಅದೇ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ, ಮೌಖಿಕವಾಗಿ ತಿಳಿಸಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ನೆಲಮಂಗಲ, ಮಣ್ಣೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರು ಹಾಜರಾಗಿರುತ್ತಾರೆ ಮತ್ತು ಇವರು ತಮ್ಮ ಮೌಖಿಕ ಹೇಳಿಕೆಗಳನ್ನು ನೀಡಿದ್ದು, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ರವರು ಅವರ ಮೇಲಿರುವ ಆರೋಪಗಳ ಬಗ್ಗೆ ಸರಿಯಾದ ಸಮಜಾಯಿಷಿ ನೀಡದೆ, ದೂರಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಹಾಜರುಪಡಿಸದ ಕಾರಣ ಸದರಿಯವರ ಲಿಖಿತ ಹೇಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) (vi) ರಡಿ ಅವನು ಮಾಜಿ ಅಧ್ಯಕ್ಷ ಅಥವಾ ಮಾಜಿ ಉಪಾಧ್ಯಕ್ಷ ಅಥವಾ ಮಾಜಿ ಸದಸ್ಯನಾಗಿ ದುರ್ನಡತೆ, ಅನುದಾನ ದುರುಪಯೋಗ ಮತ್ತು ಇನ್ನಿತರ ಯಾವುದೇ ಪ್ರಕರಣದಡಿ ಆರೋಪಿತನಾಗಿದ್ದು, ತನಿಖೆಯಲ್ಲಿ ಆರೋಪ ಸಾಬೀತಾದರೆ ತೆಗೆದು ಹಾಕಲು ಅವಕಾಶ ಕಲ್ಪಿಸಲಾಗಿದೆ.

ಬೆಂಗಳೂರು ಪ್ರಾದೇಶಿಕ ಆಯುಕ್ತರ, ವಿಚಾರಣಾ ವರದಿಯಲ್ಲಿ ಶ್ರೀ ಗಂಗಣ್ಣನವರು ನೀಡಿರುವ ಲಿಖಿತ ಹೇಳಿಕೆಯಲ್ಲಿ ಅವರ ಮೇಲಿರುವ ಆರೋಪಗಳ ಬಗ್ಗೆ ಸರಿಯಾದ ಸಮಜಾಯಿಷಿ ನೀಡದೆ ದೂರಿಗೆ ಸಂಬಂಧಿಸಿದ ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸದ ಕಾರಣ, ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ ರವರು ಪ್ರಸ್ತುತ ಸದಸ್ಯರಲ್ಲದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) (vi) ರಡಿ ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಸದರಿ ಅಧಿನಿಯಮದ ಪ್ರಕರಣ 12(ಎಲ್) ರಂತೆ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/537/ಗ್ರಾಪಂಅ/2020</u>**
**<u>ಬೆಂಗಳೂರು, ದಿನಾಂಕ:21-01-2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಗಂಗಣ್ಣ, ಮಾಜಿ ಅಧ್ಯಕ್ಷರು, ಮಣ್ಣೆ ಗ್ರಾಮ ಪಂಚಾಯಿತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) (vi) ಮತ್ತು 12(ಎಲ್) ರಂತೆ ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಅನರ್ಹಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 21/01/21.
(ಬಿ. ನವೀನ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,(ಜಿ.ಪಂ.) (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
21/1/2021

<u>ಗೆ:</u>

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು.
2) ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು.
3) ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
6) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಣ್ಣೆ ಗ್ರಾಮ ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7) ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಮುಖಾಂತರ)
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.
9) ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.